ನಿಗದಿ ಪಡಿಸುವ ಅಂಶವನ್ನು ಒಳಗೊಂಡಂತೆ ಹಲವಾರು ವಿಷಯಗಳ ಬಗ್ಗೆ ಈ ಆಯೋಗ ವರದಿ ನೀಡಬೇಕಾಗಿದೆ.

ಮೈಸೂರು ಸಕ್ಕರೆ ಕಾರ್ಖಾನೆಯು ದಿನಾಂಕ 18-8-97ರಂದು ಕಬ್ಬು ನುರಿಸುವಿಕೆಯನ್ನು ಆರಂಭಿಸಿದೆ. ಮುಂಗಡವಾಗಿ ರಾಜ್ಯ ಸರ್ಕಾರ ಟನ್ ಒಂದಕ್ಕೆ ರೂ.700 ರಂತೆ ಪ್ರಕಟಿಸಿತ್ತು. ಬೆಲ್ಲದ ಹೆಚ್ಚಿನ ಬೆಲೆ ಇದ್ದು ಕಾರ್ಖಾನೆಗೆ ಅಗತ್ಯ ಪ್ರಮಾಣದ ಕಬ್ಬು ಪೂರೈಕೆ ಆಗದಿರುವುದರಿಂದ ಕಾರ್ಖಾನೆಯ ಹೆಚ್ಚಿನ ದರ ನೀಡಬೇಕೆಂಬ ಬೇಡಿಕೆ ಇದೆ. ಆದರೆ, ಕಾರ್ಖಾನೆ ತನ್ನ ಆರ್ಥಿಕ ಪರಿಸ್ಥಿತಿ , ಆದಾಯ -ವೆಚ್ಚ ಆಧಾರದ ಮೇಲೆ ಬೆಲೆ ನೀಡಬೇಕಾಗಿದೆ. ಈಗಾಗಲೇ ರೂ.750 ಅನ್ನು ಕೊಡಲು ಕಾರ್ಖಾನೆಯ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಿಸಿದ್ದಾರೆ. ಈ ವಿಷಯದಲ್ಲಿ ರಾಜ್ಯ ಸರ್ಕಾರ ಖುದ್ದಾಗಿ ಭಾಗವಹಿಸಿ ದರ ನಿಗದಿ ಪಡಿಸುವುದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಅವಕಾಶವಿರುವುದಿಲ್ಲ. ಕಾರ್ಖಾನೆ ಹಾಗೂ ರೈತರ ನಡುವೆ ಕಬ್ಬಿನ ದರದ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳಲು (ಅಗ್ರೀಡ್ ಪೈಸ್) ಲಿಂಕ್ ಇದೆ. ಒಂದು ವೇಳೆ ಕಾರ್ಖಾನೆ ಮತ್ತು ಕಬ್ಬು ಬೆಳೆಗಾರರ ನಡುವೆ ಒಪ್ಪಂದ ಏರ್ಪಡದಿದ್ದರೆ ಸರ್ಕಾರ ಮಧ್ಯ ಪ್ರವೇಶಿಸಿ ರೈತರು ಮತ್ತು ಕಾರ್ಖಾನೆಗಳೆರಡರ ಹಿತ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡ ಕ್ರಮವಿಡುವುದು. ಮಾನ್ಯ ಸಭಾಧ್ಯಕ್ಷರೇ, ಸರ್ಕಾರ ಇದಕ್ಕೆ ರೇಟ್ ಫಿಕ್ಸ್ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಏನು ಮನವಿಯನ್ನು ಕೊಟ್ಟಿದ್ದಾರೆ, ಆ ಸಲುವಾಗಿ ನಾನು ಇನ್ನೊಮ್ಮೆ ಮೀಟಿಂಗ್ ಕರೆದು ಅದರಲ್ಲಿ ಅಧ್ಯಕ್ಷರನ್ನು, ಎಂ.ಡಿ.ಯವರನ್ನು ಮತ್ತು ಆ ವ್ಯಾಪ್ತಿಗೆ ಬರುವಂಥ ರೈತ ಪ್ರತಿನಿಧಿಗಳನ್ನು ಮತ್ತು ಶಾಸಕರುಗಳನ್ನು ಕರೆದು ರೇಟ್ ಫಿಕ್ಸ್ ಮಾಡಿ ಆದೇಶವನ್ನು ಕೊಡುತ್ತೇವೆ. ಆ ಪ್ರಕಾರ ನಾವು ಆ ರೈತರಿಗೆ ಅನುಕೂಲ ಮಾಡಿಕೊಡುತ್ತೇವೆ. ಅದು ಆಗದೇ ಇದ್ದರೆ, ಸರ್ಕಾರ ಮಧ್ಯೆ ಪ್ರವೇಶಿಸಿ ರೇಟ್ ಫಿಕ್ಸ್ ಮಾಡಲು ಪ್ರಯತ್ನ ಮಾಡುತ್ತದೆ.

(ಇ) ವಿಷಯ: ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ನಾಮಫಲಕಗಳನ್ನು ಕಿತ್ತು ಹಾಕುವುದು.

+ ಶ್ರೀ ಪಿ.ಎಸ್.ಪ್ರಕಾಶ್ (ಚಿಕ್ಕಪೇಟೆ): ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿನ ಬೆಳಿಗ್ಗೆ 6 ಗಂಟೆಗೆ ಬೆಂಗಳೂರು ನಗರದ ಆಯುಕ್ತರು ಅವೆನ್ಯೂ ರಸ್ತೆಯಲ್ಲಿರುವ ನಾಮ ಫಲಕಗಳನ್ನು ಹೊಡೆಸಿದ್ದಾರೆ, ಅಂಗಡಿಗಳವರಿಗೆ ಬಹಳ ನಷ್ಟವನ್ನುಂಟುಮಾಡಿದ್ದಾರೆ, ಕೆ.ಇ.ಬಿ ಕನೆಕ್ಷನ್ಸ್ ಮತ್ತು ಟೆಲಿಫೋನ್ ಕನೆಕ್ಷನ್ಸ್ ಕಿತ್ತಾಕಿಸಿದ್ದಾರೆ. ಅಂಗಡಿಗಳ ಕಟ್ಟಡಗಳನ್ನು ಡ್ಯಾಮೇಜ್ ಮಾಡಿಸಿದ್ದಾರೆ. ನಾಮಫಲಕಗಳನ್ನು ಹೊಡೆದು ಹಾಕುವುದಕ್ಕೆ ನಗರಪಾಲಿಕೆಯಿಂದ ಯಾವುದೇ ಸೂಚನೆಯನ್ನು ಮೊದಲೇ ಕೊಟ್ಟಿಲ್ಲ. ನಾಮಫಲಕ ಹಾಕಿಕೊಂಡಿದ್ದವರು ಈಗಾಗಲೇ ಕಾರ್ಪೊರೇಶನ್‌ಗೆ ಅಭಿವೃದ್ಧಿ ಶುಲ್ಕವನ್ನು ಕಟ್ಟಿ, ಜಾಹಿರಾತು ವಿಭಾಗದವರಿಂದ ಅನುಮತಿಯನ್ನು ಪಡೆದು ಹಾಕಿರುತ್ತಾರೆ. ಅದನ್ನೂ

ಕೂಡ ಹೊಡೆದು ಹಾಕಿದ್ದಾರೆ ಹಾಗೂ ರಾಮಚಂದ್ರ ಎನ್ನುವ ಅಂಗವಿಕಲ ವ್ಯಕ್ತಿಯೊಬ್ಬ ನಡೆಸುತ್ತಿದ್ದ ಟಿಲಿಫೋನ್ ಬೂತ್‌ನ್ನು ಹೊಡೆದುಹಾಕಿದ್ದಾರೆ. ಈತನಿಗೆ ಮೂರು ವರ್ಷಕ್ಕೆ ಗುತ್ತಿಗೆಯನ್ನಾಗಿ ಈ ಬೂತ್‌ನ್ನು ಕೊಟ್ಟಿದ್ದು ಈತ ತಿಂಗಳಿಗೆ 100-00 ರೂ.ಗಳನ್ನು ಬಾಡಿಗೆಯನ್ನಾಗಿ ಕಾರ್ಪೊರೇಷನ್‌ಗೆ ಕಟ್ಟುತ್ತಿದ್ದರು. ಇದನ್ನು ಪ್ರತಿಭಟಿಸಿ ನನ್ನ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ನಿನ್ನೆ ಬೆಳಿಗ್ಗೆ ಸಂಪೂರ್ಣವಾಗಿ ಬಂದ್ ಆಚರಣೆಯನ್ನು ಮಾಡಲಾಗಿದೆ. ಇದಲ್ಲದೆ ನನ್ನ ಬಗ್ಗೆ ಮತ್ತು ನಮ್ಮ ಸರ್ಕಾರದ ಬಗ್ಗೆ ಬಹಳಷ್ಟು ಟೀಕೆಗಳನ್ನು ಮಾಡಿ ಗಲಾಟೆ ಮಾಡಿದ್ದಾರೆ. ನಮ್ಮ ಮನೆಯ ಹತ್ತಿರ ಕೂಡ ರಾತ್ರಿ 11 ಗಂಟೆಯಲ್ಲಿ ಬಹಳಷ್ಟು ಜನರು ಗಲಾಟೆಯನ್ನು ಮಾಡಿದ್ದಾರೆ. ಇದಕ್ಕೆ ಕಾರಣವೆಂದರೆ ಮೊನ್ನೆ ದಿವಸ ಹಿರಿಯ ಸದಸ್ಯರಾದ ನಂಜೇಗೌಡರು ಚಿಕ್ಕಪೇಟೆ ಮತ್ತು ಶಿವಾಜಿನಗರದಲ್ಲಿ ಏಕೆ ಬಿಲ್ಡಿಂಗ್‌ಗಳನ್ನು ಒಡೆಯುತ್ತಿಲ್ಲ ಎಂದು ಕೇಳಿದರು. ಇದೊಂದೇ ಕಾರಣವನ್ನಿಟ್ಟುಕೊಂಡು ನಿನ್ನೆಯಿಂದ ಎಲ್ಲಾ ಬಿಲ್ಡಿಂಗ್‌ಗಳನ್ನು ಒಡೆದುಕೊಂಡು ಬರುತ್ತಿದ್ದಾರೆ. ಇದನ್ನು ಚಿಕ್ಕಪೇಟೆ, ಬಳೇಪೇಟೆ, ಅವೆನ್ಯೂ ರಸ್ತೆಯ ಮೂಲಕ ಮೈಸೂರು ಬ್ಯಾಂಕ್‌ನವರೆಗೂ ಬಿಲ್ಡಿಂಗ್‌ಗಳನ್ನು ಒಡೆದುಕೊಂಡು ಹೋಗುತ್ತೇವೆ ಎನ್ನುವ ಮಾತನ್ನು ಬೆಂಗಳೂರು ನಗರದ ಆಯುಕ್ತರು ಹೇಳಿದ್ದಾರೆ.

ಅಧ್ಯಕ್ಷರು: ಈಗ ನೀವು ಬಸವನಗುಡಿಯಲ್ಲಿ ಬಿಲ್ಡಿಂಗ್‌ಗಳನ್ನು ಏಕೆ ಒಡೆಯುತ್ತಿಲ್ಲ ಎಂದು ಕೇಳಿ. ಅಲ್ಲೂ ಬಿಲ್ಡಿಂಗ್ ಒಡೆಯುವುದು ಪ್ರಾರಂಭವಾಗಲಿ.

ಶ್ರೀ ಬಿ.ಎಸ್.ಪ್ರಕಾಶ್: ಆಯುಕ್ತರು ತೆಗೆದಕೊಂಡಿರುವ ಕ್ರಮದಿಂದ ಬೆಂಗಳೂರಿನ ನಾಗರೀಕರು ಬಹಳ ಕಿರುಕುಳವನ್ನು ಅನುಭವಿಸುತ್ತಿದ್ದಾರೆ. ಆದುದರಿಂದ ನಿಮಗೆ ನಾನು ಒಂದು ಮನವಿಯನ್ನು ಮಾಡಿಕೊಳ್ಳುವುದೇನೆಂದರೆ ನಾನು ಹೊಸದಾಗಿ ಆ ಕ್ಷೇತ್ರದಿಂದ ಆಯ್ಕೆಯಾಗಿದ್ದು ನಾನು ಎಷ್ಟೇ ಪ್ರಾಮಾಣಿಕವಾಗಿ ನಡೆದುಕೊಂಡರೂ ಕೂಡ ಈ ರೀತಿಯ ದುರಂತ ತಪ್ಪಿಲ್ಲ. ಇಂದು ಬೆಂಗಳೂರಿನಲ್ಲಿ 100 ವಾರ್ಡ್‌ಗಳಿದ್ದು ಅದಕ್ಕೆ 100 ಎ.ಇ.ಯವರುಗಳು ಇದ್ದಾರೆ, ಸುಮಾರು 35 ಎ.ಇ.ಇ.ಗಳು ಇದ್ದಾರೆ, ಇವರುಗಳೆಲ್ಲರೂ ಇದ್ದರೂ ಕೂಡ ನಗರದಲ್ಲಿ ಕಟ್ಟಡಗಳು ತಲೆ ಎತ್ತುವಾಗಲೇ ಇದರ ಬಗ್ಗೆ ಕ್ರಮ ತೆಗೆದುಕೊಂಡು ನಿಲ್ಲಿಸದೇ ಕಟ್ಟಡ ಕಟ್ಟಿಯಾದ ಮೇಲೆ ಈ ರೀತಿ ಕೆಡವಿಕೊಂಡು ಹೋಗುತ್ತಿದ್ದರೆ ಬೇಂಗಳೂರು ನಗರದಲ್ಲಿ ಒಂದುರೀತಿಯ ಅಶಾಂತ ವಾತಾವರಣ ಉಂಟಾಗುತ್ತದೆ. ನಮಗೆ ಜನರು ಶಾಪವನ್ನು ಹಾಕುತ್ತಾರೆ. ಆದುದರಿಂದ ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ಈಗತಾನೇ ಈ ವಿಷಯ ಪ್ರಸ್ತಾಪವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಮಂತ್ರಿಗಳು ತರಿಸಿಕೊಂಡು ನಾಳೆ ಇದಕ್ಕೆ ಹೇಳಿಕೆಯನ್ನು ಕೊಡಿಸಲಾಗುವುದು.